ಅಸಲು ದಾವಾ ಸಂಖ್ಯೆ: **469/2017**

ಪಿ ಡಬ್ಲ್ಯೂ: **1**

**ದಿನಾಂಕಃ 21.01.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಎ ಜಿ ಅವರಿಂದಃ

1 ನೇ ಪ್ರತಿವಾದಿ ನನ್ನ ಮಾವ ಎಂದರೆ ಸರಿ . ನಾನು 1 ನೇ ಪ್ರತಿವಾದಿ ಅವರ ಮಗ ಸತೀಶ ಅವರ ಹೆಂಡತಿ ಎಂದರೆ ಸರಿ . 2 ನೇ ವಾದಿ ನನ್ನ ಮಗಳು ಹಾಗೂ 1 ನೇ ಪ್ರತಿವಾದಿಗೆ ಮೊಮ್ಮಗಳು ಎಂದರೆ ಸರಿ . ನನ್ನ ಗಂಡ ಸತೀಶ ಅಪಘಾತದಲ್ಲಿ ಮರಣ ಹೊಂದಿರುತ್ತಾರೆಂದರೆ ಸರಿ . ಅಪಘಾತದ ಸಂಬಂಧ ನಾನು ಪ್ರಕರಣವನ್ನು ಹೂಡಿ 5 ಲಕ್ಷ ಪರಿಹಾರ ಹಣವನ್ನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ಗಂಡ ಡಿಸೆಂಬರ್ 2015 ರಲ್ಲಿ ಅಪಘಾತದಲ್ಲಿ ಮರಣ ಹೊಂದಿರುತ್ತಾರೆಂದರೆ ಸರಿ . ನನ್ನ ಗಂಡ ತೀರಿಹೋದ ನಂತರ ನಾನು ನನ್ನ ಮಗಳು ನನ್ನ ನನ್ನ ತಾಯಿಯ ಮನೆ ಭದ್ರಾವತಿ ತಾಲ್ಲೂಕು ನಾಗಸಮುದ್ರದಲ್ಲಿ ವಾಸವಾಗಿದ್ದೇವೆಂದರೆ ಸರಿ .

2 ನೇ ಪ್ರತಿವಾದಿ 1 ನೇ ಪ್ರತಿವಾದಿಯವರ ಮಗ ಎಂದರೆ ಸರಿ . 3 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಹೆಂಡತಿ ಹಾಗೂ 1 ನೇ ಪ್ರತಿವಾದಿಯ ಸೊಸೆ ಎಂದರೆ ಸರಿ . 4 ಹಾಗೂ 5 ನೇ ಪ್ರತಿವಾದಿ 1 ನೇ ಪ್ರತಿವಾದಿಯವರ ಮಕ್ಕಳು ಎಂದರೆ ಸರಿ .

1 ನೇ ಪ್ರತಿವಾದಿಗೆ ಇರುವ ಸ್ವತ್ತಿನ ವಿವರಗಳು ನನಗೆ ತಿಳಿದಿಲ್ಲ. 1 ನೇ ಪ್ರತಿವಾದಿಗೆ 3 ಜನ ಅಣ್ಣ ತಮ್ಮಂದಿರು ಇದ್ದಾರೆ ಎಂದರೆ ಸರಿ . ಸುಂದರಾಜಪ್ಪ ಎನ್ನುವವರು 1 ನೇ ಪ್ರತಿವಾದಿಯ ದೊಡ್ಡ ಅಣ್ಣ ಎಂದರೆ ಸರಿ . ದಿಃ 01.02.2007 ರಲ್ಲಿ 1 ನೇ ಪ್ರತಿವಾದಿ ಹಾಗೂ ಅವರ ಅಣ್ಣ ತಮ್ಮಂದಿರ ಮಧ್ಯೆ ಸ್ವತ್ತಿನ ವಿಭಾಗವಾಗಿರುತ್ತದೆಂದರೆ ಸರಿ . ಸದರಿ ವಿಭಾಗದಲ್ಲಿ ಸರ್ವೆ ನಂ. 71 ರಲ್ಲಿ 2 ಎಕರೆ ಜಮೀನು 1 ನೇ ಪ್ರತಿವಾದಿಯವರ ಭಾಗಕ್ಕೆ ಬಂದಿರುತ್ತದೆಂದರೆ ನನಗೆ ತಿಳಿದಿಲ್ಲ.

ದಿಃ 12.03.2008 ರಲ್ಲಿ ಸರ್ವೆ ನಂ. 71 ರಲ್ಲಿ 20 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ಅವರ ದೊಡ್ಡ ಅಣ್ಣನವರಾದ ಸುಂದರಾಜು ಅವರಿಂದ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 71 ರಲ್ಲಿ 2 ಜಮೀನುಗಳಿದ್ದು ಒಂದೇ ಪಹಣಿಯಲ್ಲಿ ನಮೂದಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಸದರಿ 20 ಗುಂಟೆ ಜಮೀನಿನ ಚೆಕ್ಕುಬಂದಿಯಲ್ಲಿ ಪೂರ್ವಕ್ಕೆ 1 ನೇ ಪ್ರತಿವಾದಿ ಜಮೀನು, ಪಶ್ಚಿಮಕ್ಕೆ ಸುಂದರಾಜಪ್ಪ ಅವರ ಜಮೀನು, ಉತ್ತರಕ್ಕೆ ಗೊಂದಿಚಟ್ನಳ್ಳಿಯ ಪಾಂಡುರಂಗಪ್ಪ ಅವರ ಜಮೀನು, ಹಾಗೂ ದಕ್ಷಿಣಕ್ಕೆ ರಾಧಮ್ಮನವರ ಜಮೀನು ಇದೆ ಎಂದರೆ ನನಗೆ ತಿಳಿದಿಲ್ಲ.

2013 ರಲ್ಲಿ ನಾವು ಒಟ್ಟು ಕುಟುಂಬದಲ್ಲಿದ್ದಾಗ 1 ನೇ ಪ್ರತಿವಾದಿ ಬಿ ಅನುಸೂಚಿ ಸ್ವತ್ತನ್ನು 3 ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿಯು ನಮಗೆ ತಿಳಿಸದೇ ಮಾಡಿಕೊಟ್ಟಿರುತ್ತಾರೆಂದು ಹೇಳುತ್ತಾರೆ. ದಿಃ 30.03.2013 ರಲ್ಲಿ ನೊಂದಾಯಿತ ದಾನಪತ್ರದ ಮೂಲಕ 3 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ

This is a True Copy of the Court Records Online. Authenticated @ districts.ecourtsindia.com/cnr/KA14030035142017/truecopy/order-2.pdf

www.ecourtsindia.com

ಬಿ ಅನುಸೂಚಿ ಸ್ವತ್ತನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ಬಿ ಅನುಸೂಚಿಯ ಸ್ವತ್ತನ್ನು ಕುಟುಂಬದಲ್ಲಿರುವ ಎಲ್ಲರಿಗೂ ತಿಳಿಸಿ, 3 ನೇ ಪ್ರತಿವಾದಿ ನೀಡಿರುತ್ತಾರೆಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ನನ್ನ ವಾದಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ ಸರ್ವೆ ನಂ. 71 ರಲ್ಲಿರುವ 20 ಗುಂಟೆ ಜಮೀನು ಹಾಗೂ ಬಿ ಅನುಸೂಚಿ ಸ್ವತ್ತಿನಲ್ಲಿ ನನಗೆ ಯಾವುದೇ ರೀತಿ ಹಕ್ಕು ಬಾಧ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. 2015 ರಿಂದ ನಾನು ನನ್ನ ತಾಯಿಯ ಮನೆಯಲ್ಲಿ ವಾಸ ಮಾಡುತ್ತಿದ್ದು, ಪ್ರತಿವಾದಿಗಳ ಜೊತೆ ವಾಸ ಮಾಡುತ್ತಿಲ್ಲ ಎಂದರೆ ಸರಿ . ನಾನು ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೊಂದಿಗೆ ಒಟ್ಟಿಗೆ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ. 71 ರಲ್ಲಿರುವ 3 ಎಕರೆ ಚಿಲ್ಲರೆ ಜಮೀನಿನ ಈಗಿನ ಮಾರುಕಟ್ಟೆ ಬೆಲೆ ಸುಮಾರು 10 ಲಕ್ಷ ರೂ . ಆಗುತ್ತದೆಂದರೆ ನನಗೆ ತಿಳಿದಿಲ್ಲ. ನನ್ನ ಗಂಡ ಅಪಘಾತದಲ್ಲಿ ಮರಣ ಹೊಂದಿದ್ದು, ಅಪಘಾತ ವಿಮೆ ಹಣದಲ್ಲಿ 1 ನೇ ಪ್ರತಿವಾದಿಗೆ ಭಾಗ ಕೊಡಬೇಕಾಗುತ್ತದೆಂದು ನಾನು ನನ್ನ ತಾಯಿ ಮನೆಯಲ್ಲಿ ವಾಸ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪ್ರತಿವಾದಿಗಳು ನನಗೆ ತೊಂದರೆ ಕೊಡುತ್ತಿದ್ದರಿಂದ ನನ್ನ ತಾಯಿ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ನಾನು ನ್ಯಾ . ದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಸ್ವತ್ತಿನ ಎ ಅನುಸೂಚಿ ಆಸ್ತಿಗಳ ಮೇಲೆ 7 ಲಕ್ಷ ರೂ . ಬ್ಯಾಂಕಿನ ಸಾಲ ಇರುತ್ತದೆಂದರೆ ನನಗೆ ತಿಳಿದಿಲ್ಲ. ಪ್ರತಿವಾದಿ ಹಾಗೂ ಅವರ ಹೆಣ್ಣು ಮಕ್ಕಳಿಗೆ ದಾವಾ ಸ್ವತ್ತಿನ ಆಸ್ತಿಯಲ್ಲಿ ಹಕ್ಕುದಾರರು ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ದಾವಾ ಸ್ವತ್ತಿನ ಆಸ್ತಿಯ ಮೇಲಿರುವ ಸಾಲಕ್ಕೆ ನಾನೂ ಕೂಡ ಜವಾಬ್ದಾರಳು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

5ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಶಿವಮೊಗ್ಗ**

This is a True Copy of the Court Records Online. Authenticated @ districts.ecourtsindia.com/cnr/KA14030035142017/truecopy/order-2.pdf